# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| (1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 422 |
| (2) | ಮಾನ್ಯ ಸದಸ್ಯರ ಹೆಸರು | ಶ್ರೀ.ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| (3) | ಉತ್ತರಿಸಬೇಕಾದ ದಿನಾಂಕ | 15.09.2022 |
| (4) | ಉತ್ತರಿಸುವ ಸಚಿವರು | ಮಾನ್ಯ ಕಾನೂನು ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ಇ-ಕೋರ್ಟ್ ಮಿಷನ್ ಅನುಷ್ಠಾನಗೊಳಿಸಲಾಗುತ್ತಿದೆಯೇ;<br>ಹಾಗಿದ್ದಲ್ಲಿ, ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ರಾಜ್ಯ ಸರ್ಕಾರಗಳ ಪಾತ್ರವೇನು ಹಾಗೂ ಈ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದೊಂದಿಗೆ ಒಡಂಬಡಿಕೆ ಆಗಿದೆಯೇ;(ಪೂರ್ಣ ವಿವರ ನೀಡುವುದು) | ಹೌದು, ಇ-ಕೋರ್ಟ್ ಪ್ರಾಜೆಕ್ಟ್ ಅನ್ನು ಕೇಂದ್ರ ಯೋಜನೆಯಡಿಯಲ್ಲಿ ಜಾರಿಗೊಳಿಸಲಾಗಿದೆ.<br><br>ರಾಜ್ಯ ನ್ಯಾಯಾಂಗದಲ್ಲಿ ಇ-ಕೋರ್ಟ್ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ಉಚ್ಚ ನ್ಯಾಯಾಲಯವು ಸಮನ್ವಯ ಕಾರ್ಯವನ್ನು ನಿರ್ವಹಿಸುತ್ತಿದೆ.<br><br>ಈ ಕುರಿತಂತೆ, ಭಾರತ ಒಕ್ಕೂಟ, ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ನಡುವೆ ದಿನಾಂಕ 16.09.2016 ರಂದು ತ್ರಿಪಕ್ಷೀಯ (ತಿಳುವಳಿಕೆ ಪತ್ರ) ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ ಮತ್ತು ಒಪ್ಪಂದದ ಪ್ರಕಾರ, ಜಿಲ್ಲಾ ನ್ಯಾಯಾಂಗಕ್ಕೆ ಹಾರ್ಡ್‌ವೇರ್‌ಗಳ ಖರೀದಿ ಮತ್ತು ತಾಂತ್ರಿಕ ಮಾನವಸಂಪನ್ಮೂಲಗಳಿಗೆ ವೇತನಕ್ಕಾಗಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. |
| ಆ) | ರಾಜ್ಯದಲ್ಲಿ ಈ ಯೋಜನೆ ಅಡಿಯಲ್ಲಿ ಜಿಲ್ಲಾ ಮತ್ತು ಇತರೆ ಕೋರ್ಟ್‌ಗಳಲ್ಲಿ ಯಾವ ಹಂತದವರೆಗೆ ಕಂಪ್ಯೂಟರ್ ಮತ್ತು ವಿಡಿಯೋ ಕಾನ್ಫರೆನ್ಸ್‌ಗಳನ್ನು ಅಳವಡಿಸಲಾಗಿದೆ ಮತ್ತು ಮೂಲ ಸೌಕರ್ಯಗಳನ್ನು ಕಲ್ಪಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿರುವ ಒಟ್ಟು ಅನುದಾನವೆಷ್ಟು; ಉಪಯೋಗಿಸಿದ ಮೊತ್ತವೆಷ್ಟು;(ಪೂರ್ಣ | ರಾಜ್ಯ ನ್ಯಾಯಾಂಗದಲ್ಲಿ ಇ-ಕೋರ್ಟ್ ಯೋಜನೆಯಡಿ 1126 ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಕಂಪ್ಯೂಟರ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.<br><br>2, 200 ನ್ಯಾಯಾಲಯಗಳಿಗೆ ಮತ್ತು 27 ಜೈಲುಗಳಿಗೆ (ಒಟ್ಟು 297) ಹಾರ್ಡ್‌ವೇರ್ ಆಧಾರಿತ VC ಯನ್ನು ಖರೀದಿಸಲು ಇ-ಕೋರ್ಟ್ ಯೋಜನೆಯಡಿ ಬಿಡುಗಡೆಯಾದ |

| | | |
|---|---|---|
| | ಮಾಹಿತಿ ನೀಡುವುದು) | ಹಣ –ರೂ.5,19,75,000/-.<br>ಈ ಪೈಕಿ ರೂ. 4,59,16,568/-ಗಳ ವೆಚ್ಚ ಮಾಡಲಾಗಿದೆ.<br>3) ನ್ಯಾಯಾಲಯಗಳಿಗೆ ಕಂಪ್ಯೂಟರ್ ಖರೀದಿಗಾಗಿ ಇ-ಕೋರ್ಟ್ಸ್ ಯೋಜನೆಯಡಿಯಲ್ಲಿ ರೂ. 19,48,73,000/-ಗಳ ಅನುದಾನ ಬಿಡುಗಡೆ ಮಾಡಲಾಗಿದೆ ಮತ್ತು ಸದರಿ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ. ಈ ಉದ್ದೇಶಕ್ಕಾಗಿ ಕೊರತೆಯಾಗಿದ್ದ ಅನುದಾನ ರೂ.4,68,97,263/- ಗಳನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ್ದು, ಸದರಿ ಮೊತ್ತವನ್ನು ಸಹ ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ. |
| ಇ) | ರಾಜ್ಯದಲ್ಲಿ ಈ ಯೋಜನೆ ಅಡಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಕೈಗೊಂಡಿರುವ ವಿವಿಧ ಕಾರ್ಯಕ್ರಮಗಳು ಸ್ಥಳೀಯ ಕೋರ್ಟ್ ವಕೀಲರು ಮತ್ತು ಕಕ್ಷಿದಾರರಿಗೆ ಯಾವ ರೀತಿಯಲ್ಲಿ ನೆರವು ನೀಡುತ್ತಿವೆ? (ಪೂರ್ಣ ವಿವರ ನೀಡುವುದು) | ಇ-ಕೋರ್ಟ್ ಯೋಜನೆಯ ಅನುಷ್ಠಾನದ ಮೂಲಕ ಸಾರ್ವಜನಿಕರಿಗೆ, ದಾವೆದಾರರಿಗೆ ಮತ್ತು ವಕೀಲರಿಗೆ ಒದಗಿಸಲಾಗುತ್ತಿರುವ ನಾಗರಿಕ ಕೇಂದ್ರಿತ ಸೇವೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

**ಸಂಖ್ಯೆ: ಲಾ-ಎಲ್‌ಸಿಇ/233/2022**

(ಜೆ.ಸಿ.ಮಾಧುಸ್ವಾಮಿ)
**ಕಾನೂನು, ಸಂಸದೀಯ ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು**

# ಅನುಬಂಧ

## ಇ-ಕೋರ್ಟ್ ಯೋಜನೆಯ ಅನುಷ್ಠಾನದ ಮೂಲಕ ಸಾರ್ವಜನಿಕರಿಗೆ, ದಾವೆದಾರರಿಗೆ ಮತ್ತು ವಕೀಲರಿಗೆ ಒದಗಿಸಲಾಗುತ್ತಿರುವ ನಾಗರಿಕ ಕೇಂದ್ರಿತ ಸೇವೆಗಳ ವಿವರಗಳು

1. ಇ-ಕೋರ್ಟ್ಸ್ ಪೋರ್ಟಲ್
2. ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್ - ಪ್ರಕರಣದ ಸ್ಥಿತಿ, ಪ್ರಕರಣದ ವಿವರಗಳು, ಆದೇಶಗಳು ಮತ್ತು ತೀರ್ಪುಗಳನ್ನು ಪಡೆಯಬಹುದಾಗಿದೆ
3. ಇ-ಫೈಲಿಂಗ್ ಪೋರ್ಟಲ್- ರಾಜ್ಯದಾದ್ಯಂತ ವ್ಯಾಜ್ಯಗಳ ಇ-ಫೈಲಿಂಗ್ ಅನ್ನು ಸಕ್ರಿಯಗೊಳಿಸಬಹುದಾಗಿದೆ.
4. ಇ-ಹಿಯರಿಂಗ್‌ಗಾಗಿ ವಿ.ಸಿ ಸೌಲಭ್ಯಗಳು- ದಾವೆದಾರರು ಮತ್ತು ವಕೀಲರು ಭೌತಿಕವಾಗಿ ಹಾಜರಾಗದೆ ವಿ.ಸಿ. ಮುಖಾಂತರ ಇ-ಹಿಯರಿಂಗ್ ನಡೆಸಬಹುದಾಗಿದೆ.
5. ಇ-ಸೇವಾಕೇಂದ್ರಗಳು- ನ್ಯಾಯಾಲಯ ಸಂಕೀರ್ಣಗಳಲ್ಲಿ ಇ-ಕೋರ್ಟ್‌ಗಳ ಸೇವೆಗಳನ್ನು ಪಡೆಯಬಹುದಾಗಿದೆ (ಪ್ರಸ್ತುತ 13 ಇ-ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಹಣದ ಲಭ್ಯತೆಗೆ ಒಳಪಟ್ಟು ಇನ್ನುಳಿದ ಎಲ್ಲಾ ನ್ಯಾಯಾಲಯ ಸಂಕೀರ್ಣಗಳಲ್ಲಿ ತೆರೆಯಲಾಗುವುದು).
6. ಪ್ರಮಾಣೀಕೃತ ಪ್ರತಿಗಳಿಗಾಗಿ ಆನ್‌ಲೈನ್ ಅರ್ಜಿ: ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಮಾಣೀಕೃತ ಅರ್ಜಿಯನ್ನು ಸಲ್ಲಿಸಲು ಪೋರ್ಟಲ್ ಅನ್ನು ಸೃಜಿಸಲಾಗಿದೆ ಮತ್ತು ಅದನ್ನು ಜಿಲ್ಲಾ ನ್ಯಾಯಾಂಗದಲ್ಲಿ ಕಾರ್ಯಗತಗೊಳಿಸಲಾಗುತ್ತದೆ.
7. ಬೆಂಗಳೂರಿನಲ್ಲಿ ಟ್ರಾಫಿಕ್ ಚಲನ್‌ಗಾಗಿ ವರ್ಚುವಲ್ ಕೋರ್ಟ್- ಸಂಚಾರ ನಿಯಮವನ್ನು ಉಲ್ಲಂಘಿಸುವವರು ಯಾವುದೇ ಸಮಯದಲ್ಲಿ ಭೌತಿಕ ಉಪಸ್ಥಿತಿಯಿಲ್ಲದೆ ದಂಡವನ್ನು ಪಾವತಿಸಲು ಅನುವು ಮಾಡಿಕೊಡುತ್ತದೆ.
8. ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಕೋರ್ಟ್ ಹಾಲ್ ನಡವಳಿಗಳ ನೇರಪ್ರಸಾರ: ಕೋರ್ಟ್ ಹಾಲ್ ನಡವಳಿಗಳ ನೇರಪ್ರಸಾರ ಮಾಡಲಾಗುತ್ತದೆ.
9. ಟೆಲಿಗ್ರಾಮ್ ಚಾನೆಲ್- ಇದು ಎಲ್ಲಾ ಕೋರ್ಟ್ ಹಾಲ್‌ಗಳ ದೈನಂದಿನ ಕಾಸ್‌ಲಿಸ್ಟ್, ಅಧಿಸೂಚನೆ, ಸುತ್ತೋಲೆ, ಸಿಟ್ಟಿಂಗ್ ಪಟ್ಟಿ ಮತ್ತು ನ್ಯಾಯಾಲಯದ ಪ್ರಕ್ರಿಯೆಗಳ ಪೋಸ್ಟ್ ಅನ್ನು ವೀಕ್ಷಿಸಲು ಅನುವು ಮಾಡಿಕೊಡುತ್ತದೆ.
10. YouTube ಚಾನೆಲ್- ಇದು ನ್ಯಾಯಾಲಯದ ಪ್ರಕ್ರಿಯೆಗಳು ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ಘಟನಾವಳಿಗಳನ್ನು ವೀಕ್ಷಿಸಲು ಶಕ್ತಗೊಳಿಸುತ್ತದೆ.
11. ನ್ಯಾಯಾಲಯ ಶುಲ್ಕ ಮತ್ತು ಪ್ರಕ್ರಿಯೆ ಶುಲ್ಕಕ್ಕೆ ಇ-ಪಾವತಿ: ಆನ್‌ಲೈನ್ ಮೂಲಕ ನ್ಯಾಯಾಲಯ ಶುಲ್ಕ ಮತ್ತು ಪ್ರಕ್ರಿಯೆ ಶುಲ್ಕವನ್ನು ಪಾವತಿಸಲು ಸಹಾಯಕವಾಗುತ್ತದೆ.
12. ಆನ್‌ಲೈನ್ ಮೂಲಕ ಪ್ರಮಾಣೀಕೃತ ಪ್ರತಿ: ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಡಿಜಿಟಲ್ ಸಹಿಯ ತೀರ್ಪುಗಳ ಇ-ಪ್ರಮಾಣೀಕೃತ ಪ್ರತಿಗಳನ್ನು ಆನ್ ಲೈನ್ ಮೂಲಕ ಪಡೆಯಲು ಸಹಾಯಕವಾಗುತ್ತದೆ
13. ಆನ್‌ಲೈನ್ ಡಿಜಿಟಲ್ ಕೇಸ್ ಡೈರಿಯು ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇಡೀ ಜಿಲ್ಲಾ ನ್ಯಾಯಾಂಗದ ಮುಂದೆ ವಕೀಲರು ಮತ್ತು ಸರ್ಕಾರಿ ಇಲಾಖೆಗಳು ತಮ್ಮ ವ್ಯಾಜ್ಯಗಳನ್ನು ಟ್ರ್ಯಾಕ್ ಮಾಡಲು ಅನುವು ಮಾಡಿಕೊಡುತ್ತದೆ.
14. ನ್ಯಾಯಾಲಯ ಸಂಕೀರ್ಣಗಳಲ್ಲಿ ಕಿಯೋಸ್ಕ್: ದಾವೆದಾರರು ಮತ್ತು ವಕೀಲರುಗಳಿಗೆ ಪ್ರಕರಣದ ವಿವರಗಳು ಮತ್ತು ಸ್ಥಿತಿಯನ್ನು ಪರಿಶೀಲಿಸಲು ಸಹಾಯಕವಾಗುತ್ತದೆ.
15. ಡಿಸ್ಪ್ಲೇ ಬೋರ್ಡ್: ದಾವೆದಾರರು ಮತ್ತು ವಕೀಲರುಗಳಿಗೆ ನ್ಯಾಯಾಲಯದ ಹಾಲ್‌ಗಳ ಕಾಸ್‌ಲಿಸ್ಟ್ ಮತ್ತು ಪ್ರಕ್ರಿಯೆಗಳನ್ನು ಅನುಸರಿಸಲು ಸಹಾಯಕವಾಗುತ್ತದೆ.
16. ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್: ಪ್ರತಿ ಜಿಲ್ಲಾ ನ್ಯಾಯಾಂಗದ ಬಗ್ಗೆ ಮಾಹಿತಿಯನ್ನು ವೀಕ್ಷಿಸಲು ಇದು ಶಕ್ತಗೊಳಿಸುತ್ತದೆ.

*****